ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
BE BOUNDLESS
Office of the Registrar Evaluation, Central College Campus, Dr Ambedkar Veedhi, Bengaluru – 560001
Ph: 080-22295559/29572003 Mail: registrarevlubcu@gmail.com/regev@bcu.ac.in

ಸಂಖ್ಯೆ:ಬೆಂ.ನ.ವಿ/ಪ.ವಿ./4ನೇ ಘಟಿಕೋತ್ಸವ/2025–26/078 ದಿನಾಂಕ: 16.05.2025

# ಅಧಿಸೂಚನೆ

**ವಿಷಯ:** ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ನಾಲ್ಕನೇ ವಾರ್ಷಿಕ ಘಟಿಕೋತ್ಸವದಲ್ಲಿ ಕಲಾ, ವಿಜ್ಞಾನ, ವಾಣಿಜ್ಯ ಮತ್ತು ಶಿಕ್ಷಣ ವಿಷಯಗಳ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರಗಳನ್ನು ಪಡೆಯಲು ಅರ್ಜಿ ಸಲ್ಲಿಸುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 16.05.2025.

*****

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳ ಮತ್ತು ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಹಾಗೂ ಸ್ವಾಯತ್ತ ಮಹಾವಿದ್ಯಾಲಯಗಳಲ್ಲಿ (Autonomous Colleges) ಕಲಾ, ವಿಜ್ಞಾನ, ವಾಣಿಜ್ಯ ಮತ್ತು ಶಿಕ್ಷಣ ವಿಷಯಗಳ ಸ್ನಾತಕ (UG) ಮತ್ತು ಸ್ನಾತಕೋತ್ತರ (PG) ಕೋರ್ಸ್‌ಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ತೃತೀಯ ವಾರ್ಷಿಕ ಘಟಿಕೋತ್ಸವದಲ್ಲಿ ಪದವಿ ಪತ್ರಗಳನ್ನು ಪಡೆಯುವ ವಿದ್ಯಾರ್ಥಿಗಳಿಗಾಗಿ, **ದಿನಾಂಕ.** 05.06.2025 ವರೆಗೆ **www.bcu.ac.in** / **uucms.karnataka.gov.in** ಆನ್‌ಲೈನ್‌ನಲ್ಲಿ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಈಗಾಗಲೇ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು ಪುನಃ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ಈ ಹಿಂದೆ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳು ಮಾತ್ರ ನಿಗದಿತ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ. ಈಗಾಗಲೇ ಪದವಿ ಪ್ರಮಾಣ ಪತ್ರ ಪಡೆದಿರುವವರು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

ಅ) **ನಿಗದಿತ ಶುಲ್ಕ (ಎಲ್ಲ ಕೋರ್ಸ್/ಪ್ರವರ್ಗಗಳಿಗೆ) ಆನ್‌ಲೈನ್ ಪಾವತಿ**

| | |
|---|---|
| ಅ) ಭಾರತೀಯ ನಾಗರೀಕರಿಗೆ | **Rs.** 1,573/- |
| ಆ) ವಿದೇಶಿ ನಾಗರೀಕರಿಗೆ | **Rs.** 6,017/- |

ಆ) **ಸ್ವಾಯತ್ತ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಪಾವತಿಸಬೇಕಾದ ನಿಗದಿತ ಶುಲ್ಕ:**

| | |
|---|---|
| ಅ) ಭಾರತೀಯ ನಾಗರೀಕರಿಗೆ | **Rs.** 3,130/- |
| ಆ) ವಿದೇಶಿ ನಾಗರೀಕರಿಗೆ | **Rs.** 11,704/- |

ಇ) **ಪಿಹೆಚ್.ಡಿ. ವಿದ್ಯಾರ್ಥಿಗಳಿಗೆ ನಿಗದಿತ ಶುಲ್ಕ**

| | |
|---|---|
| ಅ) ಭಾರತೀಯ ನಾಗರೀಕರಿಗೆ | **Rs.** 2,160/- |
| ಆ) ವಿದೇಶಿ ನಾಗರೀಕರಿಗೆ | **Rs.** 8,585/- |

ಸ್ವಾಯತ್ತ ಮಹಾವಿದ್ಯಾಲಯಗಳ ಪ್ರಾಂಶುಪಾಲರು ತಮ್ಮ ಮಹಾವಿದ್ಯಾಲಯದಿಂದ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಸೆಪ್ಟೆಂಬರ್ / ಅಕ್ಟೋಬರ್ 2024 ರವರೆಗೆ ಉತ್ತೀರ್ಣರಾದ ವಿದ್ಯಾರ್ಥಿಗಳ ಪಟ್ಟಿ ಮಾಡಿ ಅಂತಹ ವಿದ್ಯಾರ್ಥಿಗಳ ಅರ್ಜಿಗಳನ್ನು ಅಗತ್ಯ ದೃಢೀಕೃತ ದಾಖಲೆಗಳು, 2 ಪಾಸ್ಪೋರ್ಟ್ ಅಳತೆಯ ಭಾವಚಿತ್ರಗಳು ಮತ್ತು ನಿಗದಿತ ಶುಲ್ಕದೊಂದಿಗೆ ವಿಶ್ವವಿದ್ಯಾನಿಲಯದ ಕುಲಸಚಿವರು (ಮೌಲ್ಯಮಾಪನ) ರವರ ಕಛೇರಿಗೆ **ದಿನಾಂಕ.** 06.06.2025 ರೊಳಗೆ ಸಲ್ಲಿಸತಕ್ಕದು.

**ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿದ ನಂತರ ಐದು ವರ್ಷಗಳೊಳಗೆ ಪದವಿ ಪ್ರಮಾಣಪತ್ರಗಳನ್ನು ತೆಗೆದುಕೊಳ್ಳದೆ ಇರುವ ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರದ ಶುಲ್ಕದೊಂದಿಗೆ ರೂ.540/- ದಂಡ ಶುಲ್ಕವನ್ನು ಪಾವತಿಸಿ ಪದವಿ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸತಕ್ಕದು.**

| ಕ್ರ.ಸಂ. | ವಿವರ | ದಿನಾಂಕ |
|---|---|---|
| 1. | ಪೂರ್ಣಗೊಳಿಸಿದ ಅರ್ಜಿಯನ್ನು ಸ್ನಾತಕೋತ್ತರ ವಿಭಾಗಗಳು/ ಕಾಲೇಜುಗಳಿಗೆ ದಂಡ ಶುಲ್ಕವಿಲ್ಲದೆ ಸಲ್ಲಿಸಲು ಕೊನೆಯ ದಿನಾಂಕ. | 02.06.2025 |
| 2. | ಪೂರ್ಣಗೊಳಿಸಿದ ಅರ್ಜಿಯನ್ನು ಸ್ನಾತಕೋತ್ತರ ವಿಭಾಗಗಳು/ ಕಾಲೇಜುಗಳಿಗೆ ರೂ.100/- ಮೊದಲನೇ ದಂಡ ಶುಲ್ಕದೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ. | 05.06.2025 |
| 3. | ಘಟಿಕೋತ್ಸವಕ್ಕೆ ಪಿ.ಜಿ. ವಿಭಾಗಗಳಲ್ಲಿ ಮತ್ತು ಕಾಲೇಜುಗಳಲ್ಲಿ ಸ್ವೀಕರಿಸಿದ ಅರ್ಜಿಗಳನ್ನು, ಆನ್‌ಲೈನ್ ಶುಲ್ಕ ರಶೀದಿಗಳೊಂದಿಗೆ ಪಟ್ಟಿಯನ್ನು ಕುಲಸಚಿವರು (ಮೌಲ್ಯಮಾಪನ) ಅವರಿಗೆ ಸಲ್ಲಿಸಲು ಕೊನೆಯ ದಿನಾಂಕ | 06.06.2025 |

**ಸೂಚನೆಗಳು:**

1. ವಿದ್ಯಾರ್ಥಿಗಳು ತಮ್ಮ ಹೆಸರು, ನೊಂದಣಿ ಸಂಖ್ಯೆ, ವಿಳಾಸ, ಇ-ಮೇಲ್, ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ದಾಖಲಿಸತಕ್ಕದ್ದು.
2. ಈಗಾಗಲೇ ನೀಡಿರುವ ಅಂಕಪಟ್ಟಿಗಳಲ್ಲಿ ಏನಾದರೂ ತಿದ್ದುಪಡಿಗಳು ಇದ್ದಲ್ಲಿ ಅವುಗಳನ್ನು ಅರ್ಜಿಸಲ್ಲಿಸುವ ಪೂರ್ವದಲ್ಲಿ ಸರಿಪಡಿಸಿಕೊಂಡು ಅಂಕಪಟ್ಟಿಗಳ ಪ್ರತಿಗಳನ್ನು ಲಗತ್ತಿಸತಕ್ಕದು.
3. **ಒಂದು ಸಲ ಪಾವತಿಸಿದ ಘಟಿಕೋತ್ಸವ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸುವುದಿಲ್ಲ ಅಥವಾ ಮುಂದಿನ ಘಟಿಕೋತ್ಸವಕ್ಕೆ ಹೊಂದಾಣಿಕೆ ಮಾಡಿಕೊಳಲಾಗುವುದಿಲ್ಲ.**
4. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು ಮತ್ತು ಸಂಯೋಜಿತ ಕಾಲೇಜುಗಳು ಹಾಗೂ ಸ್ವಾಯತ್ತ ಕಾಲೇಜುಗಳ ಕಲಾ, ವಾಣಿಜ್ಯ, ವಿಜ್ಞಾನ, ಶಿಕ್ಷಣ ನಿಕಾಯದ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಸ್ನಾತಕ ಮತ್ತು ಸ್ನಾತಕೋತ್ತರ ಅಭ್ಯರ್ಥಿಗಳು, ಮಾತ್ರ ಪದವಿ ಪ್ರಮಾಣ ಪತ್ರಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.
5. ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳು ಎಲ್ಲಾ ಸೆಮಿಸ್ಟರುಗಳ ದೃಢೀಕೃತ ಅಂಕಪಟ್ಟಿಯ ಪ್ರತಿ, ಶುಲ್ಕ ಪಾವತಿಸಿದ - ರಶೀದಿ / ಚಲನ್ ಪ್ರತಿ ಹಾಗೂ 2 ಪಾಸ್ಪೋರ್ಟ್ ಅಳತೆಯ ಭಾವಚಿತ್ರಗಳೊಂದಿಗೆ ಆನ್‌ಲೈನ್ ಅರ್ಜಿಯ ಮುದ್ರಿತ ಪ್ರತಿಯನ್ನು ಆಯಾಯ ಸ್ನಾತಕೋತ್ತರ

ವಿಭಾಗಗಳ ಮುಖ್ಯಸ್ಥರಿಗೆ ಅಥವಾ ಆಯಾಯ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ ನಿಗದಿತ ಕೊನೆಯ ದಿನಾಂಕದಿಂದ ಮೂರು ದಿನಗಳ ಒಳಗೆ ಸಲ್ಲಿಸತಕ್ಕದು.

**ಯಾವುದೇ ಕಾರಣಕ್ಕೂ ಮುದ್ರಿತ ಅರ್ಜಿಗಳ ಪ್ರತಿಗಳನ್ನು ವಿಶ್ವವಿದ್ಯಾನಿಲಯದಲ್ಲಿ ಸ್ವೀಕರಿಸುವುದಿಲ್ಲ.**

6. ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರು ಮತ್ತು ಪ್ರಾಂಶುಪಾಲರು ಸ್ವೀಕರಿಸಲಾದ ಅರ್ಜಿಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಿ, ದೃಢೀಕರಿಸಿದ ಅರ್ಜಿ ಪ್ರತಿ ಹಾಗೂ ಪ್ರತಿ ಸೆಮಿಸ್ಟರ್ ಅಂಕ ಪಟ್ಟಿಯ ದೃಢೀಕೃತ ಪ್ರತಿ, ಶುಲ್ಕ ಪಾವತಿಸಿದ ರಶೀದಿ/ ಚಲನ್ ಪ್ರತಿ, 2 ಪಾಸ್ಪೋರ್ಟ್ ಅಳತೆಯ ಭಾವಚಿತ್ರಗಳೊಂದಿಗೆ **ಎಲ್ಲ ಅಭ್ಯರ್ಥಿಗಳ** ಪಟ್ಟಿಯನ್ನು ವಿಶ್ವವಿದ್ಯಾನಿಲಯಕ್ಕೆ **ದಿನಾಂಕ.** 06.06.2025 ರೊಳಗೆ ಸಲ್ಲಿಸತಕ್ಕದ್ದು.

ಆದೇಶದ ಮೇರೆಗೆ,

**ಕುಲಸಚಿವರು (ಮೌಲ್ಯಮಾಪನ)**

ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಕ್ಯಾಂಪಸ್
ಬೆಂಗಳೂರು – 560 001

ಗೆ,

1. ಎಲ್ಲಾ ಮುಖ್ಯಸ್ಥರುಗಳು, ಸ್ನಾತಕೋತ್ತರ ವಿಭಾಗಗಳು, ಬೆಂ.ನ.ವಿ.
2. ಎಲ್ಲಾ ಪ್ರಾಂಶುಪಾಲರು ಸಂಯೋಜಿತ/ಸ್ವಾಯತ್ತ ಮಹಾವಿದ್ಯಾಲಯಗಳು, ಬೆಂ.ನ.ವಿ.

ಪ್ರತಿ.

1. ಕುಲಪತಿಗಳ, ಕುಲಸಚಿವರ, ಕುಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳು, ಬೆಂ.ನ.ವಿ. ಬೆಂಗಳೂರು.
2. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಸಚಿವರು(ಮೌಲ್ಯಮಾಪನ)
3. ಗಣಕಯಂತ್ರ ವಿಭಾಗ, ಬೆಂ.ನ.ವಿ. ಬೆಂಗಳೂರು.
4. ಲಾಜಿಸಿಸ್ ಪ್ರತಿನಿಧಿ, ಬೆಂ.ನ.ವಿ. ಬೆಂಗಳೂರು.
5. ಪ್ರಮುಖ ದಿನಪ್ರತಿಕೆಗಳ, ಸಂಪಾದಕರು.